Original Article
ISSN (Online): 2582-7472

ShodhKosh: Journal of Visual and Performing Arts
July 2024 5(7), 1726–1729

# PHILOSOPHY OF WOMEN'S MOVEMENT IN THE CONTEXT OF FEMINISM

# ಸ್ತ್ರೀವಾದದ ಹಿನ್ನೆಲೆಯಲ್ಲಿ ಮಹಿಳಾ ಚಳವಳಿಯ ತಾತ್ವಿಕತೆ

B. S. Ganganalli [1]

[1] Associate Professor, Department of Kannada, Government First Grade Women's College, Belgaum, India

**DOI**
10.29121/shodhkosh.v5.i7.2024.6384

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

OPEN ACCESS

## ABSTRACT

**English:** The word movement itself symbolizes mobility and change. There have been many movements in this world. From the freedom movement to the Gokak movement, from the film distributors' demonstration to opposing globalization, from protesting price hikes to condemning the war-mongering policy of America.... The women's movement is one of the movements that have spread widely in history. It is, in a sense, very recent. In a sense, it is also very ancient. This is an attempt to look at the women's movement that has spread from the Sharana movement in which Akka Mahadevi also participated in today's Women's Reservation Bill, in the context of feminism. The illusion or hope that this might lay a solid foundation for the women's movement is making me think in this direction.

**Hindi:** ಚಳವಳಿ ಎಂಬ ಪದವೇ ಚಲನಶೀಲತೆಯನ್ನು, ಬದಲಾವಣೆಯನ್ನು ಸಂಕೇತಿಸುತ್ತದೆ. ಈ ಜಗತ್ತಿನಲ್ಲಿ ಅನೇಕ ಚಳವಳಿಗಳು ಆಗಿಹೋಗಿವೆ. ಸ್ವಾತಂತ್ರ್ಯ ಚಳವಳಿಯಿಂದ ಹಿಡಿದು ಗೋಕಾಕ ಚಳವಳಿಯವರೆಗೆ, ಚಲನಚಿತ್ರ ವಿತರಕರ ಪ್ರದರ್ಶನದಿಂದ ಹಿಡಿದು ಜಾಗತೀಕರಣವನ್ನು ವಿರೋಧಿಸುವವರೆಗೆ, ಬೆಲೆ ಏರಿಕೆಯನ್ನು ಪ್ರತಿಭಟಿಸುವುದರಿಂದ ಹಿಡಿದು ಅಮೆರಿಕದ ಯುದ್ಧ ದಾಹ ನೀತಿಯನ್ನು ಖಂಡಿಸುವವರೆಗೆ.... ಹೀಗೆ ವ್ಯಾಪಕವಾಗಿ ಹರಡಿಹೋಗಿರುವ ಚಳವಳಿಯ ಇತಿಹಾಸದಲ್ಲಿ ಮಹಿಳಾ ಚಳವಳಿಯೂ ಒಂದು. ಇದು, ಒಂದು ಅರ್ಥದಲ್ಲಿ ತೀರಾ ಇತ್ತೀಚಿನದೂ ಹೌದು. ಒಂದು ಅರ್ಥದಲ್ಲಿ ತುಂಬಾ ಪ್ರಾಚೀನವೂ ಹೌದು. ಅಕ್ಕ ಮಹಾದೇವಿಯೂ ಭಾಗವಹಿಸಿದ್ದ ಶರಣ ಚಳವಳಿಯಿಂದ ಇಂದಿನ ಮಹಿಳಾ ಮೀಸಲಾತಿ ಮಸೂದೆಯವರೆಗೆ ಹರಡಿರುವ ಮಹಿಳಾ ಚಳವಳಿಯನ್ನು ಸ್ತ್ರೀವಾದದ ಹಿನ್ನಲೆಯಲ್ಲಿ ಹಿಡಿದು ನೋಡುವ ಪ್ರಯತ್ನವಿದು. ಇದರಿಂದ ಮಹಿಳಾ ಚಳವಳಿಗೆ ಒಂದು ಗಟ್ಟಿ ತಳಪಾಯವನ್ನು ಹಾಕಿದಂತಾಗಬಹುದೇನೋ ಎಂಬ ಭ್ರಮೆಯೋ ಭರವಸೆಯೋ ನನ್ನನ್ನು ಈ ದಿಕ್ಕಿನಲ್ಲಿ ಯೋಚಿಸುವಂತೆ ಮಾಡುತ್ತಿದೆ.

## 1. प्रस्तावना

ಚಳವಳಿ ಎಂಬ ಪದವೇ ಚಲನಶೀಲತೆಯನ್ನು, ಬದಲಾವಣೆಯನ್ನು ಸಂಕೇತಿಸುತ್ತದೆ. ಈ ಜಗತ್ತಿನಲ್ಲಿ ಅನೇಕ ಚಳವಳಿಗಳು ಆಗಿಹೋಗಿವೆ. ಸ್ವಾತಂತ್ರ್ಯ ಚಳವಳಿಯಿಂದ ಹಿಡಿದು ಗೋಕಾಕ ಚಳವಳಿಯವರೆಗೆ, ಚಲನಚಿತ್ರ ವಿತರಕರ ಪ್ರದರ್ಶನದಿಂದ ಹಿಡಿದು ಜಾಗತೀಕರಣವನ್ನು ವಿರೋಧಿಸುವವರೆಗೆ, ಬೆಲೆ ಏರಿಕೆಯನ್ನು ಪ್ರತಿಭಟಿಸುವುದರಿಂದ ಹಿಡಿದು ಅಮೆರಿಕದ ಯುದ್ಧ ದಾಹ ನೀತಿಯನ್ನು ಖಂಡಿಸುವವರೆಗೆ.... ಹೀಗೆ ವ್ಯಾಪಕವಾಗಿ ಹರಡಿಹೋಗಿರುವ ಚಳವಳಿಯ ಇತಿಹಾಸದಲ್ಲಿ ಮಹಿಳಾ ಚಳವಳಿಯೂ ಒಂದು. ಇದು, ಒಂದು ಅರ್ಥದಲ್ಲಿ ತೀರಾ ಇತ್ತೀಚಿನದೂ ಹೌದು. ಒಂದು ಅರ್ಥದಲ್ಲಿ ತುಂಬಾ ಪ್ರಾಚೀನವೂ ಹೌದು. ಅಕ್ಕ ಮಹಾದೇವಿಯೂ ಭಾಗವಹಿಸಿದ್ದ ಶರಣ ಚಳವಳಿಯಿಂದ ಇಂದಿನ ಮಹಿಳಾ ಮೀಸಲಾತಿ ಮಸೂದೆಯವರೆಗೆ ಹರಡಿರುವ ಮಹಿಳಾ ಚಳವಳಿಯನ್ನು ಸ್ತ್ರೀವಾದದ ಹಿನ್ನಲೆಯಲ್ಲಿ ಹಿಡಿದು ನೋಡುವ ಪ್ರಯತ್ನವಿದು. ಇದರಿಂದ ಮಹಿಳಾ ಚಳವಳಿಗೆ ಒಂದು ಗಟ್ಟಿ ತಳಪಾಯವನ್ನು ಹಾಕಿದಂತಾಗಬಹುದೇನೋ ಎಂಬ ಭ್ರಮೆಯೋ ಭರವಸೆಯೋ ನನ್ನನ್ನು ಈ ದಿಕ್ಕಿನಲ್ಲಿ ಯೋಚಿಸುವಂತೆ ಮಾಡುತ್ತಿದೆ.

ಮೊದಮೊದಲು ಪಾಶ್ಚಾತ್ಯ ದೇಶಗಳಿಂದ ಆಮದಾದುದೋ ಎಂಬಂತೆ ಭಾವಿಸಲಾಗುತ್ತಿದ್ದ ಸ್ತ್ರೀವಾದದ ಬೇರುಗಳನ್ನು ಭಾರತದ ನೆಲದಲ್ಲಿ ಕನ್ನಡದ ನೆಲದಲ್ಲಿ ಹುಡುಕುವ ಸಫಲ ಪ್ರಯತ್ನ ಈಗ ಸಾಗುತ್ತಿದೆ. ಈ ದಾರಿಯಲ್ಲಿ ಮೊದಲು ಕಾಣುವುದು ಜನಪದ ಸಾಹಿತ್ಯ, ನಮ್ಮ ಎರಡು ಮಹಾಕಾವ್ಯಗಳಾದ

ರಾಮಾಯಣ, ಮಹಾಭಾರತಗಳಿಗೂ ಜಾನಪದ ಕತೆಯೇ ಮೂಲವಾದುದರಿಂದ, ಜಾನಪದ ಪರಂಪರೆಯು ಮೂಲತಃ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆಯಾದುದರಿಂದ ಆಗಿನ ಕಾಲದ ಹೆಂಗಸರು ಯಾವ ಕಷ್ಟಕ್ಕೂ ಹೆದರುತ್ತಿರಲಿಲ್ಲ. ಹೆಣ್ಣು, ಮನೆಗೆಲಸವನ್ನೆಲ್ಲಾ ಮುಗಿಸಿ ಹೊಲಗದ್ದೆಗಳಲ್ಲೂ ದುಡಿಯುತ್ತಿದ್ದ ಕಾಲ ಅದು. ಹೀಗಾಗಿ ಮನೆಗೆ ಒಂದು ಹೆಣ್ಣು ಬರುವುದೆಂದರೆ ಒಳಗೂ ಹೊರಗೆ ದುಡಿಯುವ ಒಂದು ಆಳು ಬಂದಂತೆ. ಆ ಕಾರಣಕ್ಕಾಗಿಯೇ ಕನ್ಯಾಶುಲ್ಕ, ತೆರೆ ಕೊಟ್ಟು ಹೆಣ್ಣು ತರುವ ಪದ್ಧತಿಯಿತ್ತು. ಜಾನಪದ ಪರಂಪರೆಯಿಂದ ಶೃತಿ ಪರಂಪರೆಗೆ ಬದಲಾಗುವ ವೇಳೆಗೆ ಬಹುಶಃ ಆರ್ಯರು ಇಲ್ಲಿಯ ಮೂಲ ನಿವಾಸಿಗಳನ್ನು ಸೋಲಿಸಿ ತಮ್ಮ ಆಧಿಪತ್ಯ ಸ್ಥಾಪಿಸುವ ವೇಳೆಗೆ ಅವರ ಭಾಷೆಯಾದ ಸಂಸ್ಕೃತವೂ ಈ ದೇಶದಲ್ಲಿ ಆಧಿಪತ್ಯ ಸ್ಥಾಪಿಸಿತು. ಇಡೀ ಆರ್ಯಾವರ್ತದ ಭಾವೈಕ್ಯತೆಗೆ ಸಂಸ್ಕೃತ ಭಾಷೆ ದುಡಿಯಿತು. ಸಂಸ್ಕೃತ ಸಾಹಿತ್ಯದ ಅಥವಾ ಹಿಂದೂ ಧರ್ಮದ ಅಥವಾ ವೈದಿಕ ಸಂಸ್ಕೃತಿಯ ಪ್ರಾಚೀನ ಗ್ರಂಥಗಳೆಂದರೆ ವೇದಗಳೇ.

ವೇದ ಉಪನಿಷತ್ತುಗಳು ಮೇಲುನೋಟಕ್ಕೆ ಸ್ತ್ರೀಯರಿಗೆ ಸ್ವಚ್ಛಂದ ಸ್ವಾತಂತ್ರ್ಯ ನೀಡಿರುವಂತೆ ಭಾಸವಾಗುತ್ತದೆ. ಕೆಲವು ವೇದ ಮಂತ್ರಗಳನ್ನು ಸ್ತ್ರೀಯರೇ ರಚಿಸಿದರೆಂದೂ ಪ್ರತೀತಿ. ಅದಕ್ಕೆ ನಿರ್ಬಂಧಗಳೂ ಇದ್ದಿರಬಹುದೆಂಬುದಕ್ಕೆ ಗೌತಮರ ಪತ್ನಿ ಅಹಲ್ಯ ಮತ್ತು ಜಮದಗ್ನಿಗಳ ಪತ್ನಿ ರೇಣುಕೆ, ಅವರ ಗಂಡಂದಿರ ಶಾಪಕ್ಕೆ ಗುರಿಯಾದುದೇ ಸಾಕ್ಷಿ. ಆದರೂ ನಂತರದ ಕಾಲದಲ್ಲಿ ಒಂದು ಪಿಡುಗಾದ ಸತೀ ಪದ್ಧತಿಯು ವೇದಗಳಲ್ಲಿ ಐಚ್ಛಿಕವಾಗಿದ್ದುದಕ್ಕೆ – ಒಂದು ಉದಾಹರಣೆ ಕೊಡಬಹುದು – ಗಂಡನು ಸತ್ತು ಚಿತೆಯೇರುವಾಗ ಎತ್ತರವಾದ ವೇದಿಕೆಯ ಮೇಲೆ ಚಿತೆಯನ್ನು ನಿರ್ಮಿಸಿ ಅದರ ಪಕ್ಕದಲ್ಲಿ ಸಾಂಕೇತಿಕವಾಗಿ ಅವನ ಹೆಂಡತಿಯನ್ನು ಕೂರಿಸುತ್ತಿದ್ದರು. ಅವಳ ಬಂಧುಬಳಗವು ಅವಳನ್ನು ಚೆನ್ನಾಗಿ ನೋಡಿಕೊಳ್ಳುವ ಭರವಸೆ ನೀಡಿ ಅವಳನ್ನು ಕೆಳಗಿಳಿದು ಬರುವಂತೆ ಕರೆಯುತ್ತಿದ್ದರು. ಅವಳಿಗೆ ಇನ್ನೊಂದು ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಇದ್ದಿತು. ಹೀಗೆ ಸತೀ ಪದ್ಧತಿಯು ಕೇವಲ ಸಾಂಕೇತಿಕವಾಗಿದ್ದಿತು. ಅವಳಿಗೊಮ್ಮೆ ಗಂಡನ ಮೇಲೆ ಅತ್ಯಧಿಕ ಮೋಹವಿದ್ದು ಅವನಿಲ್ಲದೇ ಬದುಕಿರುವುದೇ ಅಸಾಧ್ಯವೆನ್ನಿಸಿದ ಪಕ್ಷದಲ್ಲಿ ಅವಳು ಕೆಳಗಿಳಿಯದೇ ಹಾಗೇ ಚಿತೆಯೇರಬಹುದಿತ್ತು.

ಹೀಗೆ ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಇದ್ದ ಸ್ವಾತಂತ್ರ್ಯವು ಸ್ಮೃತಿಗಳ ಕಾಲಕ್ಕೆ ಇಲ್ಲವಾಗಿ ಸ್ಮೃತಿ ವಾಕ್ಯಗಳು ಸಾರಾಸಗಟಾಗಿ ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತಗಳನ್ನು ಪ್ರವೇಶಿಸಿ ಸ್ಮೃತಿ ಪ್ರಾಮಾಣ್ಯವು ವೇದ ಪ್ರಾಮಾಣ್ಯವಾಯಿತು. ಆಗ ಗಂಡನ ಚಿತೆಯಿಂದ ಸುಖವಾಗಿ ಕೆಳಗಿಳಿದು ಬಂದು ಬಿಡುತ್ತಿದ್ದ ಹೆಣ್ಣು ಸ್ಮೃತಿಕಾರರ ಕಣ್ಣಿಗೆ ಹುಣ್ಣಾದಳು. ಅವಳನ್ನು ಅಲ್ಲೇ ಸುಟ್ಟು, ಬಿಡುವುದೇ ಅವರಿಗೆ ನಿಯಮವಾಯಿತು. ಈ ಹಂತದಲ್ಲಿ ಮನು ಆಪಸ್ತಂಭ, ಅಶ್ವಲಾಯನ ಮೊದಲಾದವರು ವಿಧವೆಗೆ ಮರುಮದುವೆ ಬೇಡವೆಂದೂ ಅವಳು ಸೌಮಾಂಗಲ್ಯದ ಚಿಹ್ನೆಗಳನ್ನು ತೊರೆದು ಅರೆಹೊಟ್ಟೆ, ಉಂಡು ಇರಬೇಕೆಂದೂ ಸೂಚಿಸಿದರು.

ಹೀಗೆ ಸುಮಾರು ನಾಲ್ಕೈದು ಸಾವಿರ ವರ್ಷಗಳ ಪರಂಪರೆಯ ಭಾರದಲ್ಲಿ ಮತ್ತು ಸಂಸ್ಕೃತ ಭಾಷೆಯ ಪಾಲನೆ ಪೋಷಣೆಯೊಂದಿಗೆ ಶೋಷಣೆಯಲ್ಲೂ ಕಣ್ತೆರೆದ ಕನ್ನಡ ಸಾಹಿತ್ಯ ಚರಿತ್ರೆಗೆ ಬಂದರೆ ನಿಜವಾಗಿಯೂ ಸಂತೋಷವಾಗುತ್ತದೆ. ಸ್ತ್ರೀವಾದ ಎಂಬ ಪದವೊಂದಿಲ್ಲದೇ ಅದರ ಪರಿಕಲ್ಪನೆಯನ್ನು ನೀಡಿದ ಮೊಟ್ಟಮೊದಲ ಕವಿ ರನ್ನ, ತನ್ನ 'ಅಜಿತ ಪುರಾಣ'ದಲ್ಲಿ ತನಗೆ ಆಶ್ರಯ ನೀಡಿದ ಅತ್ತಿಮಬ್ಬೆಯನ್ನು ಅರವತ್ತಾರು ಪದ್ಯಗಳಲ್ಲಿ ಮನತುಂಬಿ ಹೊಗಳಿದ್ದಾನೆ. ಮಲ್ಲಪನ ಮಗಳಾಗಿ ದಲ್ಲಪನ ಸೊಸೆಯಾಗಿ ನಾಗಿಮಯ್ಯನ ಹೆಂಡತಿಯಾಗಿ ಯುದ್ಧದಲ್ಲಿ ಎಲ್ಲರನ್ನೂ ಕಳೆದುಕೊಂಡು ತನ್ನ ಸಪತ್ನಿಯೂ, ತಂಗಿಯೂ ಆದ ಗುಂಡಮಬ್ಬೆಯ ಮಗ ಅಣ್ಣಿಗದೇವನನ್ನು ಸಾಕಿ ಸಲಹಿ ಕೊನೆಗೆ ಅವನೂ ಯುದ್ಧದಲ್ಲಿ ಸಾಯಲು ತನ್ನಲ್ಲಿದ್ದ ಸಂಪತ್ತನ್ನೆಲ್ಲಾ ಜೈನ ಧರ್ಮಕ್ಕಾಗಿ ವಿನಿಯೋಗಿಸಿದ. ಪೊನ್ನನ ಶಾಂತಿ ಪುರಾಣದ ಪ್ರತಿಗಳನ್ನು ಮಾಡಿಸಿ ಚಿನ್ನ ಮತ್ತು ರತ್ನಗಳ ಜಿನಬಿಂಬದೊಂದಿಗೆ ಹಂಚಿದ, ತನ್ನಿಂದ ಅಜಿತ ಪುರಾಣವನ್ನು ಬರೆಸಿದ, ಅತ್ತಿಮಬ್ಬೆಯನ್ನು ರನ್ನ ಮನದುಂಬಿ ಹೊಗಳುತ್ತಾನೆ. ಹನ್ನೆರಡನೇ ಶತಮಾನದ ವಚನ ಚಳವಳಿಯಲ್ಲಿ ಬಸವಣ್ಣ ಅಲ್ಲಮರಿಗೆ ಸಮಕಾಲೀನರಾಗಿ ಅಕ್ಕ ಮತ್ತು ಅನೇಕ ಶಿವಶರಣೆಯರು ವಚನಗಳನ್ನು ರಚಿಸಿದ್ದಾರೆ. ವೈಯಕ್ತಿಕ ಬದುಕಿನ ನೋವು-ನಲಿವುಗಳನ್ನು ಮೀರಿ ವಚನಗಳ ಮೂಲಕ ತಮ್ಮ ಅಭಿವ್ಯಕ್ತಿ ನೀಡುವಾಗ ಸಮಾಜವು ವಿಧಿಸಿದ್ದ ಸಾಂಪ್ರದಾಯಕ ನಿರ್ಬಂಧಗಳನ್ನು ಇವರು ಮೀರಿ ಬರೆದರು. 'ನಡುವೆ ಸುಳಿವಾತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ' ಎಂದು ಹೇಳಿ ಲಿಂಗ ಭೇದವನ್ನು ವಿರೋಧಿಸಿದರು. ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಹೇಳಿ ಕುಟುಂಬ ವ್ಯವಸ್ಥೆಯನ್ನು ಧಿಕ್ಕರಿಸಿದ ಅಕ್ಕ ಆ ಕಾಲಕ್ಕೆ ತುಂಬಾ ಧೈರ್ಯದ ಹೆಜ್ಜೆಯಿಟ್ಟವಳು. ಮುಕ್ತಾಯಕ್ಕ, ನೀಲಮ್ಮ, ಗೊಗ್ಗವ್ವ ಮೊದಲಾದವರೂ ಸಾಕಷ್ಟು ದಿಟ್ಟರಾಗಿಯೇ ಮುಕ್ತ ಅಭಿಪ್ರಾಯ ನೀಡಿದ್ದಾರೆ. ಆದರೆ ವಚನ ಸಾಹಿತ್ಯವು ಸೃಷ್ಟಿಸಿದ ಈ ಬೆರಗುಗೊಳಿಸುವ ವೈಚಾರಿಕತೆ ಅಲ್ಲಿಗೇ ನಿಂತಂತೆ ತೋರುತ್ತದೆ. ಹದಿನೇಳನೇ ಶತಮಾನಕ್ಕೆ ಬಂದರೆ ಚಿಕ್ಕದೇವರಾಜ ಒಡೆಯರ ಆಶ್ರಯದಲ್ಲಿ ಕಾವ್ಯ ರಚಿಸಿದ ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ, ಶೃಂಗಾರಮ್ಮ ಇವರೆಲ್ಲಾ ಸಂಪ್ರದಾಯದ ಭಾರದಡಿ ಕಾವ್ಯ ರಚಿಸಿದವರು. ಸಂಚಿಹೊನ್ನಮ್ಮ ಕೆಳವರ್ಗದವಳಾಗಿದ್ದು ಊಳಿಗದವಳಾಗಿದ್ದು ಹೆಣ್ಣಿನ ಹಿರಿಮೆಯನ್ನು ಅಷ್ಟರಮಟ್ಟಿಗೆ ಎತ್ತಿಹಿಡಿದದ್ದೇ ಆ ಕಾಲಕ್ಕೆ ಹೆಚ್ಚಿನದಾಗಿತ್ತು.

ಹದಿನೇಳನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನಕ್ಕೆ ಬಂದರೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಮಹಿಳಾ ಯುಗವನ್ನು ನಾವು ಪ್ರವೇಶಿಸುತ್ತೇವೆ. ಪ್ರಾಚೀನ ಸಾಹಿತ್ಯದಲ್ಲಿ ಇಷ್ಟೊಂದು ವಿರಳವಾದ ಬೆರಳೆಣಿಕೆಯಂತಿರುವ ಈ ಲೇಖಕಿಯರ ಸಂಖ್ಯೆ ಆಧುನಿಕ ಕಾಲದಲ್ಲಿ ಅಪರಿಮಿತ ವೇಗದಲ್ಲಿ

ವೃದ್ಧಿಯಾಗಲು ಮೊದಲ ಕಾರಣ, ಬ್ರಿಟಿಷ್ ಸರ್ಕಾರದ ನೆರವಿನಿಂದ ಭಾರತದಲ್ಲಿ ಜಾರಿಗೆ ಬಂದ ಮಹಿಳಾ ವಿದ್ಯಾಭ್ಯಾಸ ಅದರೊಂದಿಗೆ ಬ್ರಹ್ಮ ಸಮಾಜ, ಆರ್ಯ ಸಮಾಜಗಳ ಮೂಲಕ ರಾಜಾರಾಂ ಮೋಹನ್‌ರಾಯ, ದಯಾನಂದ ಸರಸ್ವತಿ ಅವರು ಸತಿಪದ್ಧತಿ ಮತ್ತು ಬಾಲ್ಯವಿವಾಹದಂತಹ ಅನಿಷ್ಟಗಳ ವಿರುದ್ಧ ಮಾಡಿದ ಹೋರಾಟ, ಇದೇ ಸಂದರ್ಭಕ್ಕೆ ಚಿಗುರೊಡೆದು ಭಾರತದಾದ್ಯಂತ ಹಬ್ಬಿದ ಅಹಿಂಸಾತ್ಮಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಹಾತ್ಮಾಗಾಂಧಿ ಕೊಟ್ಟ ಕರೆ ಮತ್ತು ಮಹಿಳೆಯರು ಅದರಲ್ಲಿ ಭಾಗವಹಿಸಲು ದೊರತ ಮುಕ್ತ ಅವಕಾಶ ಈ ಮೂರು ಅಂಶಗಳು ಬಂಗಾಳಿ ಲೇಖಕರ ಸಾಮಾಜಿಕ ಕಾದಂಬರಿಗಳ ರಚನೆಗೆ ಪ್ರೇರಣೆ ನೀಡಿದವು. ಅವು ಕನ್ನಡಕ್ಕೆ ಅನುವಾದವಾಗಿ ಇಲ್ಲೊಂದು ಹೊಸ ಗಾಳಿ ಬೀಸಿತು. ಹೀಗೆ ಬಂದ ಹೊಸಗನ್ನಡದ ಮೊದಲ ತಲೆಮಾರಿನ ಲೇಖಕಿಯರಾದ ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಹೆಚ್.ವಿ. ಸಾವಿತ್ರಮ್ಮ, ಸಿ.ಎನ್. ಜಯಲಕ್ಷ್ಮೀದೇವಿ, ಬೆಳಗೆರೆ ಜಾನಕಮ್ಮ, ಹೆಚ್. ಶ್ಯಾಮಲಾದೇವಿ, ಹೆಚ್.ಎಸ್. ಕಾತ್ಯಾಯನಿ, ಉಳ್ಳೂರು ಮುಕಾಂಬಿಕಮ್ಮ, ಸೀತಾದೇವಿ ಪಡುಕೋಣೆ ಮೊದಲಾದವರು ನವೋದಯದ ರಮ್ಯ ಪರಂಪರೆಯಲ್ಲಿ ಬರೆಯುತ್ತಿದ್ದ, ಕುವೆಂಪು ಬೇಂದ್ರೆಯವರಿಂದಾಗಲೀ ಪ್ರಗತಿಶೀಲರಾಗಿ ರೋಚಕವಾಗಿ ಬರೆಯುತ್ತಿದ್ದ ಅನಕೃ, ತರಾಸು, ನಿರಂಜನ ಅವರಿಂದಾಗಲೀ ಪ್ರಭಾವಿತರಾಗದೇ ತಮ್ಮ ಕಾಲದ ಸುಧಾರಣಾ ವಾದಿಗಳಾದ ವೆಂಕಟರಂಗೋ ಕಟ್ಟಿ, ಕರ್ಕಿ ವೆಂಕಟರಮಣ ಶಾಸ್ತ್ರಿ, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಕೆರೂರು ವಾಸುದೇವಾಚಾರ್ಯರು ಇವರನ್ನು ಅನುಸರಿಸಿದ್ದರಿಂದ ಮೌಲಿಕ ಸಾಹಿತ್ಯವನ್ನು ರಚಿಸುವಂತಾಯಿತು. ಇವರಲ್ಲಿ ಹಲವರು ಪತ್ರಕರ್ತೆಯರು. ನಂಜನ ಗೂಡು ತಿರುಮಲಾಂಬಾ, 'ಸತೀ ಹಿತೈಷಿಣಿ'ಗ್ರಂಥಮಾಲೆಯನ್ನೂ, 'ಸನ್ಮಾಗದರ್ಶಿನಿ', ಪತ್ರಿಕೆಯನ್ನೂ ನಡೆಸುತ್ತಿದ್ದವರು, ಆರ್. ಕಲ್ಯಾಣಮ್ಮ `ಮಕ್ಕಳ ಕೂಟ' ಸ್ಥಾಪಿಸಿ, 'ಸರಸ್ವತೀ' ಎಂಬ ಪತ್ರಿಕೆ ನಡೆಸುತ್ತಿದ್ದವರು, ಹೆಚ್. ಶ್ಯಾಮಲಾದೇವಿಯವರು 'ಜಯ ಕರ್ನಾಟಕ' ಪತ್ರಿಕೆಯ ಮಹಿಳಾ ವಿಭಾಗದ ಸಂಪಾದಕಿಯಾಗಿದ್ದವರು. ಹೀಗೆ ಸಕ್ರಿಯವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ವೈಚಾರಿಕವಾಗಿ ಬರೆಯುವ ಶಕ್ತಿಸಾಮರ್ಥ್ಯಗಳಿದ್ದವರು. ಅನಂತರ ಬಂದ ತ್ರಿವೇಣಿಯವರಿಂದ ಪ್ರಾರಂಭವಾದ ಎರಡನೇ ತಲೆಮಾರಿನ ಲೇಖಕಿಯರಾರೂ ಈ ಅಕ್ಕಂದಿರ ಹಾದಿ ತುಳಿಯದೇ, ರಮ್ಯ ಪರಂಪರೆಯಲ್ಲಿ ಬರೆಯುತ್ತಾ ಬಂದ ಅನಕೃ, ತರಾಸು, ನಿರಂಜನ ಅವರನ್ನು ಅನುಸರಿಸಿದ್ದು, ಸಮೃದ್ಧತೆಗೆ ಗಮನಕೊಟ್ಟು ಮೌಲ್ಯಗಳನ್ನು ನಗಣ್ಯವಾಗಿಸಿದ್ದು, ಬದುಕಿನ ವಾಸ್ತವ ನಿಷ್ಟುರಗಳತ್ತ ಬೆನ್ನು ತಿರುಗಿಸಿದ್ದು, ಪುರುಷ ಮಾದರಿಗಳಲ್ಲೇ ಚಿಂತಿಸಿದ್ದು ಮತ್ತು ಬರೆದದ್ದು, ಓದುಗರನ್ನು ಹುಸಿಲೋಕದ ಭ್ರಮೆಯ ಪ್ರಪಂಚಕ್ಕೆ ಎಳೆದೊಯ್ದುದ್ದು ಕನ್ನಡ ಸಾಹಿತ್ಯದ ದೃಷ್ಟಿಯಿಂದ ತುಂಬಾ ದುರದೃಷ್ಟಕರವಾದ ಹೆಜ್ಜೆಯಾಯಿತು. ಈ ಕಾರಣದಿಂದಲೇ ಇಂದಿಗೂ ಮಹಿಳಾ ಸಾಹಿತ್ಯವೆಂದರೆ ಮೂಗು ಮುರಿಯುವ ವಿಮರ್ಶಕರು ಮಹಿಳಾ ಸಾಹಿತ್ಯದಲ್ಲೇನಿದೆ ಮಹಾ ? ಅದೇ ಬಂಗಲೆ, ಕಾರು, ಒಡವೆ, ಸೀರೆ ಎನ್ನುವುದು, ಅಡಿಗೆಮನ ಸಾಹಿತ್ಯ ಎಂದು ಅಣಕಿಸುವುದು ನಡೆದೇ ಇದೆ. ಪ್ರತಿ ಗೋಷ್ಠಿಯಲ್ಲಿಯೂ ವೇದಿಕೆಯ ಮೇಲಿನಿಂದ ಒಬ್ಬ ಲೇಖಕಿಯ ಹೆಸರನ್ನೂ ಪ್ರಸ್ತಾಪಿಸದಿರುವುದು ಅಥವಾ ರಾಜಕೀಯದಲ್ಲಿ ಮೀಸಲಾತಿ ಕೊಟ್ಟಂತೆ ಪ್ರತ್ಯೇಕ ಮಹಿಳಾ ಗೋಷ್ಠಿಗಳನ್ನು ನಡೆಸುವುದೂ ನಡೆದೇ ಇದೆ.

ಬ್ರಿಟಿಷರು ಸಾರ್ವತ್ರಿಕ ವಿದ್ಯಾಭ್ಯಾಸವನ್ನು ಜಾರಿಗೆ ತಂದುದು ಮಹಿಳಾ ಲೋಕಕ್ಕೆ ಹೊಸ ಬಾಗಿಲನ್ನು ತೆರೆದಂತಾಯಿತು. ಅದಕ್ಕೂ ಮೊದಲಿನ ಈ ದೇಶದ ಶಿಕ್ಷಣ ವ್ಯವಸ್ಥೆ ಎಂದರೆ ಗುರುಕುಲ, ಅದರಲ್ಲಿ ಮುಪ್ಪಿನ ಋಷಿಗಳಿಂದ ವೇದಪಾಠ, ಕೆಲವು ಬ್ರಾಹ್ಮಣ ವಟುಗಳು, ಬೆರಳಣಿಕೆಯ ಕೆಲ ಕ್ಷತ್ರಿಯ ಕುಮಾರರು, ಇವರಿಗಾಗಿ ಧನುರ್ವಿದ್ಯೆ, ಕತ್ತಿವರಸೆ ಇತ್ಯಾದಿ. ಇಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶವಿರಲಿಲ್ಲ. ಈ ಹಿನ್ನಲೆಯಲ್ಲಿ ವಿಲಿಯಂ ಬೆಂಟಿಂಕ್, ರಾಜಾರಾಂ ಮೋಹನ್‌ರಾಯ್, ಲಾರ್ಡ್ ಮೆಕಾಲೆ – ಎಲ್ಲರ ಪ್ರಯತ್ನದ ಫಲವಾಗಿ ಸಾರ್ವತ್ರಿಕ ವಿದ್ಯಾಭ್ಯಾಸವು ಲಿಂಗಬೇಧವಿಲ್ಲದೇ, ವರ್ಗಬೇಧವಿಲ್ಲದೇ ಸಿಗುವಂತಾದಾಗ ಹೊಸಲೋಕದ ಬಾಗಿಲು ತೆರೆಯಿತು. ಅದೇ ಸಂದರ್ಭದಲ್ಲಿಯೇ ಮಹಾತ್ಮ ಗಾಂಧಿಯವರ ಅಸಹಕಾರ ಸತ್ಯಾಗ್ರಹ ಚಳವಳಿಗೆ ಮಹಿಳೆಯರೂ ಸೇರುವಂತಾದುದು ಆ ಮೊದಲು ಈ ದೇಶದ ಇತಿಹಾಸವು ಕಿತ್ತೂರು ಚೆನ್ನಮ್ಮ, ಝಾನ್ಸಿ ರಾಣಿ, ಕೆಳದಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮುಂತಾದವರನ್ನು ನೋಡಿದ್ದರೂ, ಅನಂತರದಲ್ಲಿ ಸರೋಜಿನಿ ಮಹಿಷಿ, ಇಂದಿರಾಗಾಂಧಿ, ಕಿರಣ್ ಬೇಡಿ ಅಂಥವರನ್ನು ಕಂಡರೂ ಅಂಥ ಮಹಿಳೆಯರು ಇಡೀ ಮಹಿಳಾ ವರ್ಗಕ್ಕೆ ಆದರ್ಶವಾಗದೇ ಅಪವಾದವಾದುದು ಒಂದು ದೊಡ್ಡ ದುರಂತ. ಅವರುಗಳ ಸಾಧನೆಯಲ್ಲಿ ಕೌಟುಂಬಿಕ ವರ್ಗದ ಸಹಕಾರ, ಪರಿಸ್ಥಿತಿಯ ಸಹಕಾರಗಳಿದ್ದು ಸಾರಾಸಗಟಾಗಿ ಎಲ್ಲಾ ಮಹಿಳೆಯರಿಗೂ ಅದು ಸಿಗುವಂತಿರಲಿಲ್ಲ. ಆ ಕಾಲಕ್ಕೆ ರಚಿತವಾದ ಬಂಗಾಳಿ ಕಾದಂಬರಿಗಳು ಮಹಿಳಾ ವಿದ್ಯಾಭ್ಯಾಸದಿಂದುಂಟಾದ ಸಾಮಾಜಿಕ ಘರ್ಷಣೆಯನ್ನು ಸೊಗಸಾಗಿ ಚಿತ್ರಿಸಿವೆ. ಅವು ಕನ್ನಡಕ್ಕೆ ಅನುವಾದವಾಗಿ ನಂಜನಗೂಡು ತಿರುಮಲಾಂಬಾ ಅಂಥವರ ಮೇಲೂ ಪ್ರಭಾವ ಬೀರಿದ್ದವೆಂಬುದಕ್ಕೆ ಅವರ ಕಾದಂಬರಿಯ ಪಾತ್ರಗಳು ಹೆಣ್ಣು ಶಾಲೆಗೆ ಹೋಗುವ ಬಗ್ಗೆ, ಮನೆಯಲ್ಲಿ ಕುಳಿತು ಹರಟಬಾರದೆಂಬುದಕ್ಕೆ, ಮರುಮದುವೆಯಾಗಬಹುದೇ ಎಂಬ ಬಗ್ಗೆ ಚರ್ಚಿಸುವುದನ್ನು ಕಾಣಬಹುದಾಗಿದೆ.

'ಹಿಂದಣ ಹೆಜ್ಜೆಯನರಿತಲ್ಲದೇ ನಿಂದ ಹೆಜ್ಜೆಯನರಿಯಬಾರದು' ಎಂದು ಅಲ್ಲಮಪ್ರಭು ಹೇಳುತ್ತಾನೆ. ನಿಂದ ಹೆಜ್ಜೆಯನ್ನು ಎಂದರೆ ವರ್ತಮಾನವನ್ನು ಅರಿಯಲು ಹಿಂದಣ ಹೆಜ್ಜೆ ಅಂದರೆ ಭೂತವನ್ನು ಅರಿಯಬೇಕು. ಪ್ರತಿಯೊಬ್ಬರಿಗೂ ಪ್ರತಿಯೊಂದಕ್ಕೂ ಒಂದು ಪರಂಪರೆಯಿದೆ ಕನ್ನಡ ಸಾಹಿತ್ಯ ಚರಿತ್ರೆಗೂ ಒಂದು ಪರಂಪರೆಯಿದೆ. ಇದು ಅಕ್ಕಮಹಾದೇವಿಯಿಂದ ಪ್ರಾರಂಭವಾಗಿ ಇಂದಿನ ಈ ಸ್ಥಿತಿಯನ್ನು ತಲುಪಿದ. ಈ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ತುಂಬಿರುವುದೆಲ್ಲಾ

ಕಥೆ-ಕಾದಬರಿಗಳು ಮಾತ್ರವಲ್ಲ. ಪ್ರವಾಸ ಸಾಹಿತ್ಯ, ವೈದ್ಯಕೀಯ ಸಾಹಿತ್ಯ, ಶಿಶು ಸಾಹಿತ್ಯ, ವಿಮರ್ಶೆ, ಪ್ರಬಂಧ, ಕಾವ್ಯ ಮತ್ತು ವೈಚಾರಿಕ ಸಾಹಿತ್ಯದ ಕಡೆಗೆ ಲೇಖಕಿಯರ ಒಲವು ಹೆಚ್ಚುತ್ತಿರುವುದು ಒಂದು ಶುಭಸೂಚನೆಯೆಂದೇ ಹೇಳಬಹುದು.

ಸ್ವಾತಂತ್ರ್ಯ ಪೂರ್ವದ ಆದರ್ಶಗಳು ನವೋದಯ ಕಾಲದ ಸಾಹಿತ್ಯ ರಚನೆಗೆ ಸ್ಫೂರ್ತಿ ಕೊಟ್ಟಂತೆ, ಸ್ವಾತಂತ್ರ್ಯಾನಂತರದ ಭ್ರಮನಿರಸನ ಮತ್ತು ಸಿನಿಕತೆಗಳು ನವ್ಯದ ಕಾಲದ ರಚನೆಗೆ ಪ್ರೇರಣೆ ಕೊಟ್ಟವು. ಪ್ರಗತಿಶೀಲ ಮತ್ತು ದಲಿತ ಬಂಡಾಯದ ಕಾಲವು ಮುಗಿಯುತ್ತಿದ್ದಂತೆ ಸ್ತ್ರೀವಾದವು ತಲೆಯೆತ್ತಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವ್ಯೋತ್ತರ ಕಾವ್ಯ ಅಥವಾ ಬಂಡಾಯೋತ್ತರ ಸಾಹಿತ್ಯಕ್ಕೆ ಸಮಕಾಲೀನವಾಗಿ ಸ್ತ್ರೀವಾದದ ಅನಿವಾರ್ಯತೆಯನ್ನು ಗುರುತಿಸಲೇಬೇಕಾದ ಹಂತಕ್ಕೆ ನಾವಿಂದು ಬಂದಿದ್ದೇವೆ. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎಂಬಂತೆ ಕೆಲವರು ಸ್ತ್ರೀವಾದವನ್ನು ಅಸ್ಪಷ್ಟವೆಂದೂ ಚರ್ವಿತಚರ್ವಣವೆಂದೂ ಕರೆದರೂ ಸಾಹಿತ್ಯ ಚರಿತ್ರೆಯಲ್ಲಿ ಅದು ದಾಖಲಾಗುವುದನ್ನು ತಪ್ಪಿಸುವುದಂತೂ ಸಾಧ್ಯವಿಲ್ಲ.

ಈ ಹಂತದ ಸ್ತ್ರೀವಾದವು ಸಿಮನ್-ದ-ಬುವಾ ಎಂಬ ಫ್ರೆಂಚ್ ಲೇಖಕಿಯ 'ದಿ ಸೆಕೆಂಡ್ ಸೆಕ್ಸ್' ಎಂಬ ಪುಸ್ತಕದಿಂದ ಪ್ರಾರಂಭವಾಗುತ್ತದೆ ಎಂದು ನಾವು ಸ್ಥೂಲವಾಗಿ ಗುರುತಿಸುತ್ತೇವೆ. ಜರ್ಮನಿ, ಫ್ರಾನ್ಸ್ ಮೊದಲಾದ ದೇಶಗಳೂ ಸೇರಿದಂತೆ ಪ್ರಪಂಚದ ಎಲ್ಲೆಡೆ ಹೆಂಗಸನ್ನು ನೋಡುವುದು ಎರಡನೇ ದರ್ಜೆ ಪ್ರಜೆಯಾಗಿಯೇ, ಸೆಕೆಂಡ್ ಸೆಕ್ಸ್ ಎಂದರೆ ಎರಡನೇ ದರ್ಜೆ ಪ್ರಜೆ ಎಂದರ್ಥ. ಇವಳ ನಂತರ ಮೇರಿ ವೊಲಸ್ಟನ್ ಕ್ರಾಸ್, ಜಾರ್ಜ್ ಎಲಿಯಟ್, ವರ್ಜಿನಿಯಾ ವುಲ್ಫ್, ಮೆರಿ ಫರ್ಗುಸನ್, ಕೇಟ್‌ಮಿಲೆಟ್ ಇವರು ಪಾಶ್ಚಾತ್ಯ ಸ್ತ್ರೀವಾದದ ಹರಿಕಾರರೆಂದೇ ಗುರುತಿಸಲ್ಪಡುತ್ತಾರೆ. ಕನ್ನಡದಲ್ಲಿ ಪ್ರಾರಂಭಕ್ಕೆ ಬಂದ ಸ್ತ್ರೀವಾದಿ ಪ್ರವೇಶಿಕೆಗಳು, ಇವರ ವಿಚಾರ ಧಾರೆಯನ್ನೇ ಪ್ರತಿಪಾದಿಸಿದ್ದರಿಂದ ಅವು ಕಬ್ಬಿಣದ ಕಡಲೆಗಳಾಗಿ ಸಂವಹನದ ಸಾಧ್ಯತೆಯನ್ನೇ ಕಳೆದುಕೊಡಿದ್ದವು. ಆದರೆ ನಂತರದಲ್ಲಿ ಭಾರತದ ಮಣ್ಣಿಗೆ ಕನ್ನಡದ ನೆಲಕ್ಕೆ ಹತ್ತಿರವಾದ ಭಾರತೀಯ ಸ್ತ್ರೀವಾದವನ್ನು ಮಹಾತ್ಮಾಗಾಂಧಿಯವರ ಅಸಹಕಾರ ಚಳವಳಿಯಲ್ಲಿ, ವೇದ ಉಪನಿಷತ್ತುಗಳಲ್ಲಿ, ರಾಮಾಯಣ ಮಹಾಭಾರತಗಳಲ್ಲಿ ಕೊನೆಗೆ ಜಾನಪದದಲ್ಲಿ ಹುಡುಕುವ ಪ್ರಯತ್ನ ನಡೆದದ್ದು ಈಗ ಇತಿಹಾಸ.

ಭಾರತೀಯ ಸ್ತ್ರೀವಾದವು ವಿಶೇಷವಾಗಿ ಪಾತಿವ್ರತ್ಯದ ಬಗ್ಗೆ, ತಾಯ್ತನದ ಬಗ್ಗೆ, ಗರ್ಭಪಾತದ ಬಗ್ಗೆ, ದಲಿತ ಸ್ತ್ರೀ ಕಪ್ಪು ಸ್ತ್ರೀಯರು, ಮುಸ್ಲಿಂ ಸ್ತ್ರೀಯರ ಬಗ್ಗೆ, ಹೆಣ್ಣು ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ನೀಡುವ ಬಗ್ಗೆ, ಸಮಾನ ನಾಗರಿಕ ಸಂಹಿತೆಯ ಬಗ್ಗೆ, ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ, ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ ಮತ್ತು ಸ್ತ್ರೀ ಸಂಸ್ಕೃತಿಯ ಬಗ್ಗೆ, ಸ್ತ್ರೀವಾದದ ಪ್ರಸ್ತುತತೆಯ ಬಗ್ಗೆ, ಸಮೂಹ ಮಾಧ್ಯಮಗಳ ಬಗ್ಗೆ – ಹೀಗೆ ಚರ್ಚಿಸುತ್ತಾ ಹೋಗುವುದರಿಂದ ಇದು ನೇರವಾಗಿ ಮಣ್ಣಿಗಿಳಿದು ನಮ್ಮಲ್ಲಿ ಬೆರೆಯುವುದರಿಂದ ಇದು ದಂತಗೋಪುರದಲ್ಲಿ ಕುಳಿತು ಮೆರೆಯುವ ಸ್ತ್ರೀವಾದವಾಗುವುದಿಲ್ಲ, ಪಾಶ್ಚಾತ್ಮ ಪರಿಕಲ್ಪನೆಯ ಅರ್ಥವಾಗದ ಗೋಜು ಗೊಂದಲವೂ ಆಗುವುದಿಲ್ಲ. ಭಾರತೀಯ ಸ್ತ್ರೀವಾದ ರೂಪುಗೊಳ್ಳುವುದು ಅಥವಾ ರೂಪುಗೊಳ್ಳಬೇಕಾಗಿರುವುದು, ಅದರ ಹೊಳವುಗಳು ಹೊಮ್ಮುವುದು ಇತಿಹಾಸದ ಬೆಳಕಿನಿಂದ ವರ್ತಮಾನದ ಸಮಗ್ರತೆಯನ್ನು ಗ್ರಹಿಸುವ, ಭವಿಷ್ಯತ್ತಿನ ಬೆಳಕಿನೆಳೆಗಳನ್ನು ಕಾಣಬಲ್ಲ ಸೂಕ್ಷ್ಮವೂ ವ್ಯಾಪಕವೂ ಆದ ಸೃಜನಶೀಲತೆಯಲ್ಲಿ ದಾರ್ಶನಿಕತೆಯಲ್ಲಿ. ಅದೊಂದು ಯುಗದ ಮಥನದ ನವನೀತ, ಹಲವು ಕ್ಷೇತ್ರಗಳ ಪರಿಣತಿ ಸಂವೇದನಾ ಶಕ್ತಿಗಳ ಫಲ.

**ಪರಾಮರ್ಶನ ಗ್ರಂಥಗಳು**

ಎಚ್.ಎಸ್.ಶ್ರೀಮತಿ (ಸಂ.), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
ಮಲ್ಲಿಕಾ ಎಸ್. ಘಂಟಿ-ಕನ್ನಡ ಮಹಿಳಾ ಕಥಾ ಸಾಹಿತ್ಯ